


೭

ಕಲಿಯುವ ಕಲೆ

# ಸುಂದರಬನ

ಶಿಕ್ಷಕರು/ಮಕ್ಕಳು/ಪಾಲಕರಲ್ಲಿ ನಿವೇದನೆ:
‘ಸುಂದರಬನ’ದಲ್ಲಿ ಸುಂದರ ಕಲಿಕಾ ಅನುಭವ ಪಡೆಯಲು ಆಯಾ ಪುಟಗಳಲ್ಲಿ ಕೊಟ್ಟಿರುವ ‘ನಮ್ಮ ಆಶಯ’ವನ್ನು ತಾವು ಗಮನಿಸಿ. ಆ ಪ್ರಕಾರ ಚಟುವಟಿಕೆಗಳನ್ನು ಮಾಡಿರಿ/ಮಾಡಿಸಿರಿ.

ಹೆಸರು: ..............................................................................

ಶಾಲೆ: ..............................................................................

ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
Dhwani Educational Resource Centre

ನವೆಂಬರ್ – ಡಿಸೆಂಬರ್ ೨೦೨೪–೨೫

‘ಧ್ವನಿ’ ಶೈಕ್ಷಣಿಕ ಯೋಜನೆಗಳ ವ್ಯಾಪ್ತಿಯಲ್ಲಿ ಉಚಿತ ಹಂಚಿಕೆಗಾಗಿ

ಪೂರಣ ಯೋಜನೆ
Poorana 2024-25 Project is Supported by Many Individual Donors

# ಚಿತ್ರ ಬರಹ....







ಖುಷಿ ಕಲಿಕೆಗಾಗಿ

**ನಮ್ಮ ಆಶಯ:** ಮೇಲಿನ ಫೋಟೋಗಳನ್ನು ಗಮನಿಸು. ನಂತರ ಅವುಗಳಿಗೆ ಸೂಕ್ತವಾದ ಶೀರ್ಷಿಕೆ/ ತಲೆಬರಹವನ್ನು ಕೊಡು. ಚಿತ್ರಗಳ ಕುರಿತು ಒಂದೆರಡು ವಾಕ್ಯ ಬರೆ.

**ಭಾಷಾ ಚೌಕ**

**ಕಾಳಜಿ – Concrrn** (ಕನ್ಸರ್ನ್)
**ಸೃಷ್ಟಿ – Creation** (ಕ್ರಿಯೇಶನ್)
**ಸಂಭ್ರಮ – Excitement** – (ಎಕ್ಸೈಟ್‌ಮೆಂಟ್)

# ಮಂಡಲ ಕಲೆ



ಖುಷಿ ಕಲಿಕೆಗಾಗಿ

**ನಮ್ಮ ಆಶಯ:** ಮೇಲೆನ ಮಂಡಲಕಲೆಯಲ್ಲಿ ಅರಳಿದ ಚಿತ್ರವನ್ನು ಸ್ವಲ್ಪ ಸಮಯ ತದೇಕಚಿತ್ತದಿಂದ ಗಮನಿಸು. ಅನಂತರ ನಿಧಾನವಾಗಿ ನಿನಗೆ ಇಷ್ಟವಾಗುವ ಬಣ್ಣಗಳನ್ನು ಹಚ್ಚು.

**'ಮಂಡಲ ಕಲೆ'ಯನ್ನು ಹೇಗೆ ಬಿಡಿಸುವುದು? ಎಂಬುದರ ವಿಡಿಯೋವನ್ನು ನೋಡಲು ಇಲ್ಲಿರುವ QR ಕೋಡನ್ನು ಸ್ಕ್ಯಾನ್ ಮಾಡಿ ನೋಡು.**

# ಜಾನಪದ ಕಲೆ



ಹಸೆ ಚಿತ್ರ ಕಲೆಯ ಕುರಿತ ವಿಡಿಯೋ ನೋಡಲು ಪಕ್ಕದಲ್ಲಿರುವ QR ಕೋಡ್ ಬಳಸು.

**ನಮ್ಮ ಆಶಯ:** ಮೇಲೆ ಹಸೆ ಚಿತ್ರಕಲೆಯಲ್ಲಿ ಅರಳಿದ ಚಿತ್ರವನ್ನು ಕೊಡಲಾಗಿದೆ, ಗಮನಿಸು. ನಂತರ ಅದೇ ಚಿತ್ರವನ್ನು ಬೇರೊಂದು ಹಾಳೆಯಲ್ಲಿ ಬಿಡಿಸುವ ಪ್ರಯತ್ನ ಮಾಡು. ಹಸೆ ಚಿತ್ರಕಲೆಯ ಕುರಿತು ಹಿರಿಯರಿಂದ ತಿಳಿ.

**ಭಾಷಾ ಚೌಕ**


- **ಅಲಂಕರಿಸು – Decorate** (ಡೆಕರೇಟ್)
- **ಸಂಪ್ರದಾಯ – Tradition** (ಟ್ರಡಿಷನ್)
- **ಸೃಜನಾತ್ಮಕ - Creative** (ಕ್ರಿಯೇಟಿವ್)

ಮಿತ ಕಲಿಕೆಗಾಗಿ

# ಮಾಹಿತಿ ಪುಟ

## ರಾಜಾ ರಾಮಮೋಹನ ರಾಯ್ (೧೭೭೨-೧೮೩೩)





ಭಾರತದ ಸಾಮಾಜಿಕ ಸುಧಾರಣೆಯ ಬಗ್ಗೆ ತುಂಬಾ ಕಾಳಜಿ, ಕಳಕಳಿ ಹೊಂದಿದ್ದವರು ರಾಜಾ ರಾಮಮೋಹನರಾಯ. ಇವರು ಹುಟ್ಟಿದ್ದು ಪಶ್ಚಿಮ ಬಂಗಾಲದ ಹೂಗ್ಲಿ ಜಿಲ್ಲೆಯ ರಾಧಾನಗರದಲ್ಲಿ ೧೭೭೨ ಮೇ ೨೨ರಂದು. ತಂದೆ ರಮಾಕಾಂತ, ತಾಯಿ ತಾರಣೀದೇವಿ. ಮೋಹನ ರಾಯರ ಹಿರಿಯರು ಬಂಗಾಲ ನವಾಬರಲ್ಲಿ ಅಧಿಕಾರಿ ಆಗಿದ್ದರು. ರಾಯ ಅಥವಾ ರಾಯ್ ಎಂಬುದು ಬಂಗಾಲದ ನವಾಬನು ರಾಜಾರಾಮರ ಮುತ್ತಜ್ಜ ಕೃಷ್ಣ ಚಂದ್ರ ಬ್ಯಾನರ್ಜಿಯವರಿಗೆ ನೀಡಿದ್ದ ಬಿರುದು.

ಬಾಲಕ ರಾಮಮೋಹನನ ಪ್ರಾಥಮಿಕ ಶಿಕ್ಷಣ ಮನೆಯಲ್ಲಿಯೇ ನಡೆಯಿತು. ಅನಂತರ ಅರಬ್ಬೀ, ಪರ್ಷಿಯಾ ಭಾಷೆಗಳನ್ನು ಪಾಟ್ನಾದಲ್ಲಿ ಕಲಿತರು. ಸಂಸ್ಕೃತವನ್ನೂ ಚೆನ್ನಾಗಿ ಅಧ್ಯಯನ ಮಾಡಿದರು. ಇಪ್ಪತ್ತೊಂದನೆಯ ವಯಸ್ಸಿನಲ್ಲಿ ಇಂಗ್ಲಿಷ್ ಓದಲು ಪ್ರಾರಂಭಿಸಿ ಅದರ ಮೇಲೂ ಪ್ರಭುತ್ವ ಸಾಧಿಸಿದರು. ಇವರೊಬ್ಬ ಅಸಾಮಾನ್ಯ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದರು.

ಅನಂತರ ರಾಜಾರಾಮ ಈಸ್ಟ್ ಇಂಡಿಯಾ ಕಂಪನಿಯಲ್ಲಿ ೧೮೦೩ರಲ್ಲಿ ಕೆಲಸಕ್ಕೆ ಸೇರಿದರು. ಕೆಲ ಕಾಲದ ಬಳಿಕ ತಮ್ಮ ಜೀವನವನ್ನು ಭಾರತದ ಏಳಿಗೆಗಾಗಿ ಮೀಸಲಿಡಲು ನಿರ್ಧರಿಸಿದರು. ೧೮೧೫ರಲ್ಲಿ 'ಆತ್ಮೀಯ ಸಭಾ' ಎಂಬ ಸಂಘವನ್ನು ಹುಟ್ಟು ಹಾಕಿ, ಹೆಣ್ಣುಮಕ್ಕಳ ಮಾರಾಟ, ಜಾತಿವ್ಯವಸ್ಥೆ, ಸತಿ ಸಹಗಮನ ಪದ್ಧತಿ ಮುಂತಾದ ಸಾಮಾಜಿಕ ಅನಿಷ್ಟಗಳ ವಿರುದ್ಧ ಹೋರಾಡಿದರು. ಇವರ ಹೋರಾಟದ ಫಲವಾಗಿ ೧೮೨೯ರಲ್ಲಿ ಆಗಿನ ಗವರ್ನರ್ ಲಾರ್ಡ್ ವಿಲಿಯಂ ಬೆಂಟಿಂಕ್ ಸತಿಪದ್ಧತಿ ಕಾನೂನು ಬಾಹಿರ ಎಂದು ಘೋಷಿಸಿದನು. ೧೮೨೮ರಲ್ಲಿ ಇವರು 'ಬ್ರಹ್ಮಸಮಾಜ' ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಬ್ರಹ್ಮಸಮಾಜವು ಎಲ್ಲ ಏಕದೇವತಾವಾದಿಗಳ ತಾಣವಾಗಿತ್ತು.

ರಾಮಮೋಹನರು ೧೮೩೦ ನವೆಂಬರ್ ೧೫ರಂದು ಇಂಗ್ಲೆಂಡಿಗೆ ಪ್ರಯಾಣ ಬೆಳೆಸಿದರು. ಅಲ್ಲಿ ಭಾರತದ ಕೃಷಿಕರ ದುಃಸ್ಥಿತಿಯನ್ನು ವಿವರಿಸಿ, ಭಾರತದಲ್ಲಿ ಸಂಗ್ರಹವಾದ ಕಂದಾಯವನ್ನು ಇಂಗ್ಲೆಂಡಿನಲ್ಲಿ ವೆಚ್ಚ ಮಾಡಬಾರದೆಂದು ಆಗ್ರಹಿಸಿದರು. ಅರ್ಹತೆಯುಳ್ಳ ಭಾರತೀಯರನ್ನು ನ್ಯಾಯಾಂಗದ ಹುದ್ದೆಗಳಿಗೆ ಆಯ್ಕೆ ಮಾಡಲು, ಉನ್ನತ ಆಡಳಿತ ವ್ಯವಸ್ಥೆಯಲ್ಲಿ ಅರ್ಹರಾದ ಭಾರತೀಯರನ್ನೇ ನೇಮಿಸಲು ಒತ್ತಾಯಿಸಿದರು. ಆದರೆ ಸ್ವದೇಶಕ್ಕೆ ಮರಳುವ ಮುನ್ನ ಮೆದುಳಿಗೆ ಸಂಬಂಧಿಸಿದ ಕಾಯಿಲೆಗೆ ತುತ್ತಾದರು. ೧೮೩೩ ಸೆಪ್ಟೆಂಬರ್ ೨೭ ರಂದು ಬ್ರಿಸ್ಟಲ್‌ನಲ್ಲಿ ಕೊನೆಯುಸಿರೆಳೆದರು. ಅಲ್ಲಿಯೇ ಇವರ ಅಂತ್ಯಕ್ರಿಯೆ ನಡೆಯಿತು. ಕೆಳಗಿರುವುದು ಇಂಗ್ಲೆಂಡಿನ ಬ್ರಿಸ್ಟಲ್‌ನಲ್ಲಿರುವ ರಾಜಾ ರಾಮಮೋಹನ ರಾಯರ ಸಮಾಧಿ.

ಆಧಾರ: 'ಸಾಮಾಜಿಕ ಮತ್ತು ಧಾರ್ಮಿಕ ಸುಧಾರಕರು' ಪುಸ್ತಕ






**ನಕ್ಷೆಯಲ್ಲಿ ಬ್ರಿಸ್ಟಲ್ ನಗರವನ್ನು ಗುರುತಿಸಿರುವುದು ನೋಡಬಹುದು.**




**ಇಂಗ್ಲೆಂಡಿನ ಬ್ರಿಸ್ಟಲ್‌ನಲ್ಲಿರುವ ಗ್ರೀನ್ ಕಾಲೇಜಿನ ಆವರಣದಲ್ಲಿರುವ ರಾಜಾರಾಂ ಮೋಹನ್‌ರಾಯ್ ಅವರ ಪ್ರತಿಮೆ**

# ಜಾಲದಾಟ ೧

ಭೂಗೋಲ: 'ಆಸ್ಟ್ರೇಲಿಯಾ' ಜಾಲಕ್ಕೆ ಪ್ರೇರಕ

ಆರಂಭ




ಮುಕ್ತಾಯ

**ನಮ್ಮ ಆಶಯ:** ಈ ಜಾಲ ಯಾವ ಖಂಡದ ನಕ್ಷೆಯಂತೆ ಕಾಣುತ್ತಿದೆ ಎನ್ನುವುದನ್ನು ಗುರುತಿಸು. ನಂತರ ಜಾಲದಲ್ಲಿ 'ಆರಂಭ'ದಿಂದ ಶುರು ಮಾಡಿ 'ಮುಕ್ತಾಯ' ಮಾಡಲು ೬೦ ಸೆಕೆಂಡ್ ಸಮಯ. ಪ್ರಯತ್ನ ಮಾಡು.

# ಜಾಲದಾಟ ೨

ಋಷಿ ಕಲಿಕೆಗಾಗಿ




**ನಮ್ಮ ಆಶಯ:** ಪಕ್ಕದಲ್ಲಿರುವ ಜಾಲದಲ್ಲಿ 'ಆರಂಭ'ದಿಂದ ಶುರು ಮಾಡಿ 'ಮುಕ್ತಾಯ' ಮಾಡಲು ೬೦ ಸೆಕೆಂಡ್ ಸಮಯ. ಪ್ರಯತ್ನ ಮಾಡು.

# ಬರವಣಿಗೆಯ ಪುಟ






ಚಿತ್ರಕೃಪೆ: 'ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ' ಪುಸ್ತಕ ಪ್ರೇರಕ

**ನಮ್ಮ ಆಶಯ:** ಮೇಲಿನ ಚಿತ್ರದಲ್ಲಿರುವ ವ್ಯಕ್ತಿಯನ್ನು ಗುರುತಿಸಿ ಅವರ ಹೆಸರು ಗೆರೆ ಮೇಲೆ ಬರೆ. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಇವರ ಪಾತ್ರದ ಕುರಿತು ಎಂಟು–ಹತ್ತು ಸಾಲು ಬರೆ.

**ಭಾಷಾ ಚೌಕ**


**ಸ್ವಾತಂತ್ರ್ಯ – Freedom** (ಫ್ರೀಡಂ)
**ದೇಶಾಭಿಮಾನ - Patriotism** (ಪೇಟ್ರಿಯಾಟಿಸಮ್)

# ಚುಕ್ಕಿಯಾಟ – ೧



**ನಮ್ಮ ಆಶಯ:** ಈ ಚುಕ್ಕಿಯಾಟದಲ್ಲಿ 1 ರಿಂದ 150ರವರೆಗಿನ ಚುಕ್ಕಿಗಳನ್ನು ಸೇರಿಸು. ನಂತರ ಮೂಡುವ ಚಿತ್ರದ ಕುರಿತು ಮಾತನಾಡು.

# ಚುಕ್ಕಿಯಾಟ – ೨



**ನಮ್ಮ ಆಶಯ:** ಈ ಚುಕ್ಕಿಯಾಟದಲ್ಲಿ 1 ರಿಂದ 150ರವರೆಗಿನ ಚುಕ್ಕಿಗಳನ್ನು ಸೇರಿಸು. ನಂತರ ಮೂಡುವ ಚಿತ್ರದ ಕುರಿತು ಮಾತನಾಡು.

# ಸರಳ ಚಿತ್ರ

**ಸ್ವಾಮಿ ವಿವೇಕಾನಂದ**
**(ಕ್ರಿ.ಶ ೧೮೬೩ – ೧೯೦೨)**




**ಸ್ವಾಮಿ ವಿವೇಕಾನಂದರ ಜೀವನದ ಪ್ರಮುಖ ಘಟನೆಗಳು**


* **ಜನನ** – ಜನವರಿ ೧೨, ೧೮೬೩
* **ರಾಮಕೃಷ್ಣ ಪರಮಂಸರ ಭೇಟಿ** – ೧೮೮೨
* **ಭಾರತ ಪರ್ಯಟನೆ** – ೧೮೮೮
* **ಕನ್ಯಾಕುಮಾರಿ ಭೇಟಿ** – ೧೮೯೨
* **ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಭಾಷಣ ಮಾಡಿದ್ದು** – ೧೮೯೩
* **ರಾಮಕೃಷ್ಣ ಮಿಷನ್ ಸ್ಥಾಪನೆ** – ೧೮೯೭
* **ಮರಣ** – ಜುಲೈ ೪, ೧೯೦೨

ಇತಿಹಾಸ: 'ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು' ಪಾಠಕ್ಕೆ ಪೂರಕ

**ನಮ್ಮ ಆಶಯ:** ಮೇಲೆ ಸ್ವಾಮಿ ವಿವೇಕಾನಂದರ ಪೆನ್ಸಿಲ್ ಚಿತ್ರ ಕೊಡಲಾಗಿದೆ ಗಮನಿಸು. ಅದರಂತೆ ಖಾಲಿ ಜಾಗದಲ್ಲಿ ಸ್ವಾಮಿ ವಿವೇಕಾನಂದರ ಚಿತ್ರ ಬಿಡಿಸಿ ಬಣ್ಣ ಹಚ್ಚು. ಆನಂತರ ಸ್ವಾಮಿ ವಿವೇಕಾನಂದರ ಕುರಿತು ತರಗತಿಯಲ್ಲಿ ಮಾತನಾಡು.

# ಕಣ್ಣುರುಕು (ವ್ಯತ್ಯಾಸ ಗುರುತಿಸು)





ಭೂಗೋಲ: 'ಆಸ್ಟ್ರೇಲಿಯಾ' ವಾರಕ್ಕೆ ಪೂರಕ


**ನಮ್ಮ ಆಶಯ:** ಮೇಲಿನ ಚಿತ್ರಗಳು ನೋಡುವುದಕ್ಕೆ ಒಂದೇ ತರಹ ಕಂಡರೂ ಅವುಗಳಲ್ಲಿ ಹತ್ತು ವ್ಯತ್ಯಾಸಗಳು ಇವೆ. ಅವುಗಳನ್ನು ಗುರುತಿಸು. ನಂತರ ಆಸ್ಟ್ರೇಲಿಯಾ ಖಂಡದಲ್ಲಿ ಕಂಡುಬರುವ ಕಾಂಗರೂಗಳ ವಿಶೇಷತೆಯ ಬಗ್ಗೆ ತಿಳಿದುಕೊ.

**ಭಾಷಾ ಚೌಕ**

**ವಿಶೇಷತೆ – Speciality** (ಸ್ಪೇಷಲಿಟಿ)

**ನೆಗೆ – Jump** (ಜಂಪ್)

# ಬಣ್ಣದಾಟ





ಭೂಗೋಲ: 'ಆಸ್ಟ್ರೇಲಿಯಾ' ಪುಸ್ತಕ ಪುಟದ

೧. ಮೇಲಿನ ರೇಖಾನಕ್ಷೆಯಲ್ಲಿ ಕಪ್ಪು ಬಣ್ಣದಲ್ಲಿ ಗುರುತಿಸಿರುವ ಖಂಡ ಯಾವುದು?: ..........................................

೨. ಜಗತ್ತಿನ ಎಲ್ಲ ಭೂಖಂಡಗಳು, ಸಾಗರಗಳು ಅದರಲ್ಲಿ ಕಾಣುತ್ತಿವೆಯೆ? ..........................................

೩. ಚಿತ್ರದಲ್ಲಿ ಕುಳಿತಿರುವವರು ಯಾರು?..........................................

೪. ಅವರು ನುಡಿಸುತ್ತಿರುವ ವಾದ್ಯ ಯಾವುದು? ಅದನ್ನು ಏತಕ್ಕಾಗಿ ಬಳಸುತ್ತಾರೆ?..........................................

೫. ವ್ಯಕ್ತಿಗಳ ಹಿಂದೆ ಕಾಣಿಸುತ್ತಿರುವ ಹೆಬ್ಬಂಡೆಯ ಹೆಸರು ಏನು?..........................................

೬. ಚಿತ್ರದಲ್ಲಿನ ಹುಡುಗ ಕೈಯಿಂದ ಬೀಸುತ್ತಿರುವುದು ಏನು? ಅದರ

ವಿಶೇಷತೆ ಏನು?..........................................

**ಭಾಷಾ ಚೌಕ**

ಖಂಡ – **Continent** (ಕಾಂಟಿನೆಂಟ್)

ರೇಖಾನಕ್ಷೆ – **Outline map** (ಔಟ್‌ಲೈನ್ ಮ್ಯಾಪ್)

**ನಮ್ಮ ಆಶಯ:** ಕೊಟ್ಟಿರುವ ರೇಖಾಚಿತ್ರಕ್ಕೆ ಬಣ್ಣ ಹಚ್ಚು. ನಂತರ ಮೇಲಿನ ಪ್ರಶ್ನೆಗಳಿಗೆ ಉತ್ತರ ಬರೆ. ಇದಕ್ಕಾಗಿ ಶಿಕ್ಷಕರ ಸಹಾಯ ಪಡೆಯಬಹುದು.

# ದ್ವಿಭಾಷಾ – ಪದಕೋಶ

## ‘ಕನ್ನಡ – ಇಂಗ್ಲೀಷ್’ ಅರ್ಥಪಟ್ಟಿ 1

| ಕನ್ನಡ | ಇಂಗ್ಲೀಷ್ | ಕನ್ನಡ | ಇಂಗ್ಲೀಷ್ |
|---|---|---|---|
| ಸಂಗ್ರಾಮ | Battle (ಬ್ಯಾಟ್‌ಲ್) | ಹವಳ | Coral (ಕೋರಲ್) |
| ಮೂಢನಂಬಿಕೆ | Superstition (ಸೂಪರ್‌ಸ್ಟಿಷನ್) | ಜಲಚರ ಪ್ರಾಣಿಗಳು | Aquatic Animals (ಅಕ್ವಾಟಿಕ್ ಅನಿಮಲ್ಸ್) |
| ಶಿಸ್ತು | Discipline (ಡಿಸಿಪ್ಲೀನ್) | ಹರಳು | Gem (ಜೆಮ್) |
| ಜಲಮಾರ್ಗ | Water way (ವಾಟರ್ ವೇ) | ಬಂದರು | Port / Harbour (ಪೋರ್ಟ್/ಹಾರ್ಬರ್) |
| ದೇಶಾಭಿಮಾನ | Patriotism (ಪೇಟ್ರಿಯಾಟಿಸಮ್) | ಅನ್ವೇಷಣೆ | Investigation (ಇನ್ವೆಸ್ಟಿಗೇಷನ್) |
| ಪ್ರಚಾರ | Publicity (ಪಬ್ಲಿಷಿಟಿ) | ಶಿಲಾಶಾಸನ | Inscription (ಇನ್ಸ್‌ಕ್ರಿಪ್ಷನ್) |
| ಗಡಿ | Border (ಬಾರ್ಡರ್) | ಹುಲ್ಲುಗಾವಲು | Prairie (ಪ್ರೈಅರೀ) |
| ಸಂರಕ್ಷಣೆ | Preservation (ಪ್ರಿಸರ್ವೇಶನ್) | ಸಿಂಹಾಸನ | Throne (ತ್ರೋನ್) |
| ಗೌರವ | Respect (ರೆಸ್ಪೆಕ್ಟ್) | ಋತುಗಳು | Seasons (ಸೀಸನ್ಸ್) |
| ಶಾಂತಿ | Peace (ಪಿಸ್) | ಜಲಸಂಧಿ | Strait (ಸ್ಟ್ರೈಟ್) |
| ಧ್ಯಾನ | Meditation(ಮೆಡಿಟೇಶನ್) | ತೀರ್ಪು | Judgment (ಜಡ್ಜ್‌ಮೆಂಟ್) |


ಮುಖ ಕಲಿಕೆಗಾಗಿ

## ‘ಕನ್ನಡ – ಇಂಗ್ಲೀಷ್’ ಅರ್ಥಪಟ್ಟಿ 2

| ಕನ್ನಡ | ಇಂಗ್ಲೀಷ್ | ಕನ್ನಡ | ಇಂಗ್ಲೀಷ್ |
|---|---|---|---|
| ಪರಿಸರ | | ಸುಧಾರಣೆ | |
| ಸಮಾನತೆ | | ನಂಬಿಕೆ | |
| ಸೈನಿಕರು | | ಪರ್ವತ | |
| ನಾಶ | | ಪ್ರಸ್ಥಭೂಮಿ | |
| ಅಂಚೆ ಚೀಟಿಗಳು | | ರಾಸಾಯನಿಕ | |
| ತೆರಿಗೆ | | ಭೇಟಿ | |
| ಹೋರಾಟ | | ಪ್ರಶಸ್ತಿ | |

**ನಮ್ಮ ಆಶಯ:** ಮೇಲೆ ಕೊಟ್ಟಿರುವ ‘ಕನ್ನಡ – ಇಂಗ್ಲೀಷ್’ ಅರ್ಥಪಟ್ಟಿ 1 ಗಮನಿಸು. ಅದರಲ್ಲಿ ಕನ್ನಡ ಪಠ್ಯಪುಸ್ತಕದ ೫, ೬ನೇ ಪಾಠ ಮತ್ತು ಸಮಾಜ ವಿಜ್ಞಾನ ಪಠ್ಯಪುಸ್ತಕದ ೧೫ ಮತ್ತು ೧೬ನೇ ಪಾಠದಲ್ಲಿನ ಆಯ್ದ ಪದಗಳಿಗೆ ಇಂಗ್ಲೀಷ್ ಸಮಾನಾರ್ಥಕ ಪದಗಳನ್ನು ಕೊಡಲಾಗಿದೆ. ಓದಿ ಅರ್ಥಮಾಡಿಕೊ. ನಂತರ ‘ಕನ್ನಡ – ಇಂಗ್ಲೀಷ್’ ಅರ್ಥಪಟ್ಟಿ 2ರಲ್ಲಿ ಕೇವಲ ಕನ್ನಡ ಪದಗಳನ್ನು ಕೊಡಲಾಗಿದೆ. ಅವುಗಳಿಗೆ ಇಂಗ್ಲೀಷ್ ಸಮಾನಾರ್ಥಕ ಪದಗಳನ್ನು ಬರೆ. ಅದಕ್ಕಾಗಿ https://kanaja.karnataka.gov.in/ಶಬ್ದಕೋಶ–ತಿರುವಿ, https://baraha.com/kannada/main.php, https://alar.ink/, ಮೈಸೂರು ವಿಶ್ವವಿದ್ಯಾಲಯದ ‘ಇಂಗ್ಲೀಷ್ – ಕನ್ನಡ ನಿಘಂಟು’ ಮುಂತಾದ ನಿಘಂಟುಗಳ ಸಹಾಯ ಪಡೆಯಿರಿ.

# ಬಣ್ಣದಾಟ



ಭೂಗೋಲ: 'ಆಸ್ಟ್ರೇಲಿಯಾ' ಪಾಠಕ್ಕೆ ಪೂರಕ

**ನಮ್ಮ ಆಶಯ:** ಆಸ್ಟ್ರೇಲಿಯಾ ಖಂಡದಲ್ಲಿ ಕಂಡು ಬರುವ ಕೆಲವು ಪ್ರಾಣಿ ಮತ್ತು ಪಕ್ಷಿಗಳ ಚಿತ್ರಗಳನ್ನು ಕೊಡಲಾಗಿದೆ. ಅವುಗಳನ್ನು ಗುರುತಿಸು. ನಂತರ ಅವುಗಳಲ್ಲಿ ಯಾವುದಾದರೂ ಒಂದು ಪ್ರಾಣಿಯ ಚಿತ್ರವನ್ನು ಕೆಳಗಿನ ಖಾನೆ(ಆಯತ)ಯಲ್ಲಿ ಬಿಡಿಸಿ, ಎಲ್ಲಾ ಪ್ರಾಣಿಗಳಿಗೂ ಬಣ್ಣ ಹಚ್ಚು.

# ನಕ್ಷಾ ಚಟುವಟಿಕೆ

ನಕ್ಷೆ – ೧




ಆಕರ: 'ಸ್ವಾತಂತ್ರ್ಯ ಸಂಗ್ರಾಮ' ಮಾಹಿತಿ ಪುಸ್ತಕ

ನಕ್ಷೆ – ೨



**ನಮ್ಮ ಆಶಯ:**

**ಹೆಜ್ಜೆ–೧:** ನಕ್ಷೆ–೧ನ್ನು ಸರಿಯಾಗಿ ಗಮನಿಸು. ಅದರಲ್ಲಿ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗಿಯಾಗಿದ್ದ ಪ್ರಮುಖ ಸ್ಥಳಗಳನ್ನು ಗುರುತಿಸಲಾಗಿದೆ.

**ಹೆಜ್ಜೆ–೨:** ನಕ್ಷೆ–೨ರಲ್ಲಿ ಅವೇ ಸ್ಥಳಗಳನ್ನು ಗುರುತಿಸು. ಅವುಗಳ ಅಕ್ಷಾಂಶ ಮತ್ತು ರೇಖಾಂಶಗಳನ್ನು ತಿಳಿಯಲು ಪ್ರಯತ್ನಿಸು.

**ಹೆಜ್ಜೆ–೩:** ನಿಮ್ಮ ಶಾಲೆಯಲ್ಲಿ ಭಾರತದ ದೊಡ್ಡ ಗೋಡೆ ನಕ್ಷೆ ಇದ್ದರೆ ಅದರಲ್ಲಿ ಈ ಸ್ಥಳಗಳನ್ನು ಗುರುತಿಸು.

# ಗುರುತಿಸುವಾಟ



ಇತಿಹಾಸ: 'ಸ್ವಾತಂತ್ರ್ಯ ಸಂಗ್ರಾಮ' ಪಾಠಕ್ಕೆ ಪೂರಕ

**ನಮ್ಮ ಆಶಯ:** 1. ಕೆಳಗಿನ ಪಟ್ಟಿಯಲ್ಲಿ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಮಹನೀಯರ ಹೆಸರುಗಳಿವೆ. ಅವುಗಳ ಸಹಾಯದಿಂದ ಮೇಲಿನ ರೇಖಾನಕ್ಷೆ ಒಳಗಿನ ವ್ಯಕ್ತಿಗಳ ರೇಖಾಚಿತ್ರಗಳನ್ನು ಗುರುತಿಸು.

2. ಮೇಲಿನ ಖಾಲಿ ರೇಖಾನಕ್ಷೆಯಲ್ಲಿ ಭಾರತದ ನೆರೆಹೊರೆಯ ದೇಶಗಳು ಯಾವುವೆಂದು ಗುರುತಿಸಿ ಅವುಗಳ ಹೆಸರು ಬರೆ. ಪ್ರತಿ ದೇಶಕ್ಕೂ ಬೇರೆ ಬೇರೆ ಬಣ್ಣವನ್ನು ಹಗುರವಾಗಿ ಹಚ್ಚು. ಇದಕ್ಕಾಗಿ ನಿನ್ನ ಪಠ್ಯಪುಸ್ತಕದ ಸಹಾಯ ಪಡೆ.

| ಭಾಷಾ ಚೌಕ |
| --- |
| **ನೆರೆಹೊರೆ – Neighbour** (ನೈಬರ್) |
| **ಸ್ವಾತಂತ್ರ್ಯ – Freedom** (ಫ್ರೀಡ್‌ಂ) |

**ಚಂದ್ರಶೇಖರ ಆಜಾದ್, ಸುಭಾಷ್ ಚಂದ್ರ ಬೋಸ್, ಮೇಡಂ ಕಾಮಾ, ದಾದಾಬಾಯಿ ನವರೋಜಿ, ಮಹಾತ್ಮಾ ಗಾಂಧೀಜಿ, ಶ್ರೀಅರವಿಂದ, ಭಗತ್‌ಸಿಂಗ್, ಗೋಪಾಲಕೃಷ್ಣ ಗೋಖಲೆ, ಲಾಲಾ ಲಜಪತ್ ರಾಯ್, ಬಾಲಗಂಗಾಧರ ತಿಲಕ್, ಮೌಲಾನಾ ಅಬ್ದುಲ್ ಕಲಾಂ ಆಜಾದ್, ಜವಾಹರಲಾಲ್ ನೆಹರು, ಅನಿಬೆಸೆಂಟ್**


# ಅಕ್ಷರ ಜಾಲ

| | | | | | | | | | | | |
|---|---|---|---|---|---|---|---|---|---|---|---|
| ಸ | ತಿ | ಪ | ದ್ಧ | ತಿ | ಸ | ವ | ಬ್ರ | ಹ್ಮ | ಸ | ಮಾ | ಜ |
| ರಾ | ಮ | ಕೃ | ಷ್ಣ | ಪ | ರ | ಮ | ಹಂ | ಸ | ಗ | ರು | ಮಾ |
| ಜಾ | ರಾ | ನಿ | ಷ | ಪ್ರಾ | ದಿ | ಮ | ತಾಂ | ತ್ಯಾ | ಟೋ | ಪಿ | ಕ |
| ರಾ | ಮ | ಸ | ತ್ಯಾ | ರ್ಥ | ಪ್ರ | ಕಾ | ಶ | ಅ | ವು | ಸ್ವಾ | ಸ |
| ಮ | ಕೃ | ಮುಂ | ಪು | ನಾ | ಬ್ಬ | ವು | ಕ | ಲಿ | ಕೃ | ಮಿ | ತ್ಯ |
| ಮೋ | ಷ್ಣ | ಡ | ತ್ರ | ಸ | ನ | ಬಿ | ಸಾ | ಫ | ಬ | ವಿ | ಶೋ |
| ಹ | ಮಿ | ರ | ಕ | ಮಾ | ಬ | ಹಾ | ದ್ದೂ | ರ್ | ಷಾ | ವೇ | ಧ |
| ನ | ಶ | ಗಿ | ರ | ಜ | ಳೆ | ಅ | ಜ್ಯ | ಚ | ವ | ಕಾ | ಕ |
| ರಾ | ನ್ | ಭೀ | ಮಂ | ಗ | ಲ | ಪಾಂ | ಡೆ | ಳು | ರಾ | ನಂ | ಸ |
| ಯ | ಚ | ಮ | ಜ್ಯೋ | ತಿ | ಬಾ | ಪು | ಲೆ | ವ | ಭ | ದ | ಮಾ |
| ಝಾ | ನ್ಸಿ | ರಾ | ಣಿ | ಲ | ಕ್ಷ್ಮೀ | ಬಾ | ಯಿ | ಳಿ | ಟ್ರ | ಡ | ಜ |
| ನಾ | ರಾ | ಯ | ಣ | ಗು | ರು | ಎ | ನಾ | ನಾ | ಸಾ | ಹೇ | ಬ್ |

**ನಮ್ಮ ಆಶಯ:** ಈ ಅಕ್ಷರಜಾಲದಲ್ಲಿ ನಿನ್ನ ಇತಿಹಾಸ ಪಠ್ಯಪುಸ್ತಕದ 15 ಮತ್ತು 16ನೇ ಪಾಠಕ್ಕೆ ಸಂಬಂಧಿಸಿದ 18 ಪದಗಳಿವೆ. ಅವುಗಳನ್ನು ಹುಡುಕಿ ಬರೆ.

ಇತಿಹಾಸ: '15 ಮತ್ತು 16ನೇ ಪಾಠಕ್ಕೆ ಪೂರಕ

# ಬಣ್ಣದಾಟ




ಇತಿಹಾಸ: 'ಸ್ವಾತಂತ್ರ್ಯ ಸಂಗ್ರಾಮ' ಪಾಠಕ್ಕೆ ಪೂರಕ

**ನಮ್ಮ ಆಶಯ:** ಜಲಿಯಾನ್ ವಾಲಾ ಬಾಗ್ ಘಟನೆಯ ರೇಖಾಚಿತ್ರ ಕೊಡಲಾಗಿದೆ ಗಮನಿಸಿ, ಬಣ್ಣ ಹಚ್ಚು. ನಂತರ ಆ ಘಟನೆಯ ಕುರಿತು ಪುಟ್ಟ ಪ್ರಬಂಧವನ್ನು ಬೇರೊಂದು ಹಾಳೆಯಲ್ಲಿಬರೆ.

**ಭಾಷಾ ಚೌಕ**

**ಸೈನಿಕ – Soldier** (ಸೋಲ್ಜರ್)
**ಬಂದೂಕು – Gun** (ಗನ್)
**ಕಾನೂನು – Law** (ಲಾ)


# ಸಂಗ್ರಹಿಸು–ಅಂಟಿಸು









































| ಭಾಷಾ ಚೌಕ | |
|---|---|
| **ಅಂಚೆಚೀಟಿ** | - **Postal stamp** (ಪೋಸ್ಟಲ್ ಸ್ಟಾಂಪ್) |
| **ಸಂಗ್ರಹ** | – **Collect** (ಕಲೆಕ್ಟ್) |
| **ಚರ್ಚೆ** | – **Discussion** (ಡಿಸ್‌ಕಷನ್) |


**ನಮ್ಮ ಆಶಯ:** ಇಲ್ಲಿ ಇತಿಹಾಸ ೧೫, ೧೬ ಮತ್ತು ೧೭ನೇ ಪಾಠಕ್ಕೆ ಸಂಬಂಧಿಸಿದ ವಿಶೇಷ ಅಂಚೆಚೀಟಿಗಳ ಸಂಗ್ರಹವಿದೆ. ಆಯಾ ಅಂಚೆಚೀಟಿಗಳ ಕೆಳಗೆ ಅವರವರ ಹೆಸರು ಬರೆ. ಈ ಅಂಚೆ ಚೀಟಿಗಳನ್ನು ಕುರಿತು ಚರ್ಚಿಸು. ಸಾಧ್ಯವಾದಷ್ಟು ಇಂತಹ ವಿಶೇಷ ಅಂಚೆಚೀಟಿಗಳನ್ನು ನೀನೂ ಸಂಗ್ರಹಿಸಿ ಒಂದು ಪುಸ್ತಕದಲ್ಲಿ ಅಂಟಿಸು.

ಚಿತ್ರಗಳು: 'ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು' ಮತ್ತು 'ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ' ಪಾಠಗಳಿಗೆ ಪೂರಕ

# ಆಸ್ಟ್ರೇಲಿಯಾದ ರಾಜ್ಯಗಳು ಹಾಗೂ ಪ್ರಮುಖ ನಗರಗಳು

೧. ಆಸ್ಟ್ರೇಲಿಯಾದ ರಾಜಕೀಯ ರೇಖಾನಕ್ಷೆಯನ್ನು ಇಲ್ಲಿ ಕೊಡಲಾಗಿದೆ. ಇದರಲ್ಲಿ ಆಸ್ಟ್ರೇಲಿಯಾದ ರಾಜ್ಯಗಳನ್ನು ಗುರುತಿಸು. ಅದಾದ ಬಳಿಕ, ನಕ್ಷೆಯಲ್ಲಿ ವೃತ್ತದಿಂದ ಗುರುತು ಮಾಡಿರುವ ಸ್ಥಳಗಳನ್ನು ಗಮನಿಸು. ಅವು ಆಸ್ಟ್ರೇಲಿಯಾದ ಪ್ರಮುಖ ನಗರಗಳು. ಆಯಾ ನಗರಗಳ ಹೆಸರನ್ನು ಬರೆ. ಇದಕ್ಕಾಗಿ ಒಳ್ಳೆಯ ನಕ್ಷೆ/ಪಠ್ಯಪುಸ್ತಕದ ಸಹಾಯವನ್ನು ಪಡೆಯಬಹುದು. ನಗರಗಳ ಅಕ್ಷಾಂಶ ಮತ್ತು ರೇಖಾಂಶಗಳನ್ನು ಉತ್ತಮ ಅಟ್ಲಾಸ್ ಸಹಾಯದಿಂದ ತಿಳಿಯಲು ಯತ್ನಿಸು.




೨. ಇಲ್ಲಿ ಆಸ್ಟ್ರೇಲಿಯಾದ ರಾಷ್ಟ್ರಲಾಂಛನದ ರೇಖಾಚಿತ್ರ ಕೊಡಲಾಗಿದೆ. ಗಮನಿಸು. ರೇಖಾಚಿತ್ರಕ್ಕೆ ಸೂಕ್ತವಾದ ಬಣ್ಣ ಹಚ್ಚು. ಲಾಂಛನದಲ್ಲಿನ ಪ್ರಾಣಿ ಪಕ್ಷಿಗಳನ್ನು ಗುರುತಿಸು.


**ನಕ್ಷಾಚಟುವಟಿಕೆ**

# ಆಸ್ಟ್ರೇಲಿಯಾದ ನದಿಗಳು, ಸರೋವರಗಳು ಮತ್ತು ಸಾಗರಗಳು


ನಕ್ಷೆ–೧ನ್ನು ಸರಿಯಾಗಿ ಗಮನಿಸು. ಅನಂತರ ಅವೆಲ್ಲ ಹೆಸರುಗಳನ್ನು ಪುನಃ ನಕ್ಷೆ–೨ರಲ್ಲಿ ಗುರುತಿಸು. ಕೆಳಗಿನ ಅಂಶಗಳನ್ನು ಕುರಿತು ಆಲೋಚಿಸು. ಒಳ್ಳೆಯ ನಕ್ಷೆಯ ಸಹಾಯದಿಂದ ಉತ್ತರಿಸುವ ಪ್ರಯತ್ನ ಮಾಡು.

* ನಕ್ಷೆಯಲ್ಲಿ ಯಾವ ಯಾವ ಕೊಲ್ಲಿಗಳು ಕಾಣುತ್ತಿವೆ? * ಆಸ್ಟ್ರೇಲಿಯಾದ ಪ್ರಮುಖ ನದಿಗಳಾವುವು? * ಆಸ್ಟ್ರೇಲಿಯಾದಲ್ಲಿ ಹಾದುಹೋಗಿರುವ ವೃತ್ತ ಯಾವುದು?
* ಆಸ್ಟ್ರೇಲಿಯಾವನ್ನು ಯಾವ ಯಾವ ಸಾಗರ/ಸಮುದ್ರಗಳು ಸುತ್ತುವರೆದಿವೆ? * ಹವಳದ ದಂಡೆ ಎಲ್ಲಿದೆ? * ಜಲಸಂಧಿ ಎಂದರೇನು?
* ನಕ್ಷೆಯಲ್ಲಿ ಯಾವ ಜಲಸಂಧಿಗಳು ಕಾಣುತ್ತಿವೆ? * ಸರೋವರ ಎಂದರೇನು? * ಆಸ್ಟ್ರೇಲಿಯಾದಲ್ಲಿನ ಪ್ರಮುಖ ಸರೋವರಗಳು ಯಾವುವು?

ನಕ್ಷೆ–೧





ನಕ್ಷೆ–೨



# ಕಣ್ಣರಳಿಸಿ ನೋಡಿ



ಮುಖವಲ್ಲದ ಮುಖ




ಚದುರಂಗದಾಟ!!


ಮಿತಿ ಕಲಿಕೆಗಾಗಿ



ಎಲೆ ಪಕ್ಷಿಗಳು!!


# ನೀವೇ ಹೇಳಿ....




**ನಮ್ಮ ಆಶಯ:** ಮೇಲಿನ ಫೋಟೋಗಳಲ್ಲಿರುವ ಸನ್ನಿವೇಶಗಳನ್ನು ಗಮನಿಸು. ಅವುಗಳ ಕುರಿತು ನಿನ್ನ ವಿಚಾರಗಳನ್ನು ಹೇಳು. ಸ್ನೇಹಿತರೊಂದಿಗೂ ಚರ್ಚಿಸು.

# ಬಣ್ಣದಾಟ



ಸಾಂದರ್ಭಿಕ ಚಿತ್ರಗಳು



**ನಮ್ಮ ಆಶಯ:** ಮೇಲಿನ ಚಿತ್ರವನ್ನು ಗಮನಿಸಿ ಬಣ್ಣ ಹಚ್ಚು. ನಂತರ ನಿಮ್ಮ ಮನೆ/ಊರಲ್ಲಿ ದೀಪಾವಳಿ ಹಬ್ಬವನ್ನು ಹೇಗೆ ಆಚರಣೆ ಮಾಡಿದ್ದಿರಿ ಎನ್ನುವುದನ್ನು ಕುರಿತು ತರಗತಿಯಲ್ಲಿ ನಿನ್ನ ಅನುಭವವನ್ನು ಹಂಚಿಕೊ.

# ಬಣ್ಣದಾಟ



ಸಾಂದರ್ಭಿಕ ಚಿತ್ರಗಳು



**ನಮ್ಮ ಆಶಯ:** ಇಲ್ಲಿ ಇರುವ ಚಿತ್ರಗಳನ್ನು ಗಮನಿಸಿ, ಬಣ್ಣ ಹಚ್ಚು. ನಂತರ ನಿಮ್ಮ ಮನೆ/ಊರಲ್ಲಿ ಕ್ರಿಸ್‌ಮಸ್ ಹಬ್ಬವನ್ನು ಹೇಗೆ ಆಚರಣೆ ಮಾಡುತ್ತಾರೆ ಎನ್ನುವುದನ್ನು ತಿಳಿದುಕೊ. ಅನಂತರ ನಿನ್ನ ಅನುಭವವನ್ನು ಚಿಕ್ಕ ಲೇಖನ ರೂಪದಲ್ಲಿ ಬರೆ.

**ಭಾಷಾ ಚೌಕ**

**ಪಟಾಕಿ – Cracker** (ಕ್ರ್ಯಾಕರ್)

**ದೀಪ – Lamp** (ಲ್ಯಾಂಪ್)

**ಸಂತಸ – Happiness** (ಹ್ಯಾಪಿನೆಸ್)

# ಬಣ್ಣದಾಟ





**ನಮ್ಮ ಆಶಯ:** ಆಸ್ಟ್ರೇಲಿಯಾದ ಬುಡಕಟ್ಟು ಜನಾಂಗದವರು ಬಂಡೆಯ ಮೇಲೆ ಚಿತ್ರಿಸಿರುವ ವರ್ಣಚಿತ್ರವನ್ನು ಮೇಲೆ ಕೊಡಲಾಗಿದೆ. ಗಮನಿಸು. ಇಲ್ಲಿ ಸ್ವಾಭಾವಿಕವಾಗಿ ಸಿಗುವ ಎಲೆ, ಹಣ್ಣು, ಬೇರು, ಹೂವುಗಳನ್ನೇ ಬಳಸಿ, ಚಿತ್ರಿಸಿರುವುದು ವಿಶೇಷ. ಖಾಲಿ ಇರುವ ಜಾಗದಲ್ಲಿ ನಿನಗೆ ಸುಲಭವಾಗಿ ಸಿಗುವ ಹೂವು, ಹಣ್ಣು, ತರಕಾರಿಗಳನ್ನು ಬಳಸಿ ಒಂದು ವರ್ಣಚಿತ್ರ ಮೂಡಿಸಲು ಯತ್ನಿಸು.

**ಭಾಷಾ ಚೌಕ**

**ಸ್ವಾಭಾವಿಕ – Natural** (ನ್ಯಾಚುರಲ್)
**ಗುಹಾಚಿತ್ರ – Cave art** (ಕೇವ್ ಆರ್ಟ್)
**ಬಂಡೆ – Rock** (ರಾಕ್)

# ಕಣ್ಣಿಗೆ ಹಬ್ಬ




ಧ್ವನಿ ಫೋಟೋ

ದಕ್ಷಿಣ ಭಾರತದ ಜಲಿಯನ್ ವಾಲಾ ಬಾಗ್ ಎಂದೇ ಪ್ರಸಿದ್ಧಿ ಪಡೆದಿರುವ ವಿದುರಾಶ್ವತ್ಥದಲ್ಲಿ (ಗೌರಿಬಿದನೂರು ತಾ॥ ಚಿಕ್ಕಬಳ್ಳಾಪುರ ಜಿ॥) ಇರುವ ಸ್ವಾತಂತ್ರ್ಯ ಸಮರದ ಹುತಾತ್ಮರ ಸ್ಮಾರಕ.


ಸಂಪರ್ಕ ಮಾಹಿತಿ:
ಧ್ವನಿ
ಶೈಕ್ಷಣಿಕ ಸಂಪನ್ಮೂಲ ಕೇಂದ್ರ
# ೨೬, ಪುಷ್ಪಾಂಜಲಿ
೩ನೇ ಅಡ್ಡರಸ್ತೆ, ಶಿವಗಿರಿ,
ಧಾರವಾಡ ೫೮೦ ೦೦೨
ಮೊ: ೯೯೮ ೬೬೬ ೧೦೫೫
dhwanitrust@gmail.com,
www.dhwanitrust.org


ಇಲ್ಲಿನ ಚಿತ್ರಗಳನ್ನು ವಿವಿಧ ಅಂತರ್ಜಾಲ ತಾಣಗಳಿಂದ ಕೃತಜ್ಞತಾಪೂರ್ವಕವಾಗಿ ತೆಗೆದುಕೊಂಡು ಅಗತ್ಯಕ್ಕೆ ತಕ್ಕಂತೆ ಅಳವಡಿಸಿಕೊಳ್ಳಲಾಗಿದೆ.


ಗಮನಿಸಿ : ಈ ಶೈಕ್ಷಣಿಕ ಸಂಪನ್ಮೂಲವನ್ನು ಕೇವಲ ಶೈಕ್ಷಣಿಕ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಇದನ್ನು ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರದ ಪೂರ್ವಾನುಮತಿಯಿಲ್ಲದೇ ವಾಣಿಜ್ಯ ಉದ್ದೇಶಗಳಿಗಾಗಿ ಪುನರ್ಮುದ್ರಿಸುವುದಾಗಲೀ, ಬಳಸಿಕೊಳ್ಳುವುದಾಗಲೀ ನಿಷಿದ್ಧ. ಶೈಕ್ಷಣಿಕ ಉದ್ದೇಶದಿಂದ ಶಿಕ್ಷಕರು, ಪಾಲಕರು, ಸಂಪನ್ಮೂಲ ವ್ಯಕ್ತಿಗಳು ಇದನ್ನು ಉಪಯೋಗಿಸುವುದಾದರೆ ಧ್ವನಿ ಶೈ.ಸಂ.ಕೇಂದ್ರದ ಗಮನಕ್ಕೆ ತರವುದು ಅಪೇಕ್ಷಣೀಯ.